ಹೊಳೆನರಸೀಪುರದ ಅಪರ ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ.

ಸಿ.ಸಿ. ನಂಃ **1014/2015**

| | | | |
|---|---|---|---|
| ಸಾಕ್ಷಿಯ ಹೆಸರು | ಃ ಮೋನಿಕಾ ರೀನಾ ಟೆಲ್ಲಿಸ್ | ಸಿ.ಡಬ್ಲ್ಯೂ | ಃ 5 |
| ಗಂಡ ಹೆಸರು | ಃ ಪ್ರಸನ್ನ ಜಾಯೇಲ್ | ಪಿ.ಡಬ್ಲ್ಯೂ | ಃ 5 |
| ವಯಸ್ಸು | ಃ 39 ವರ್ಷ | ಪ್ರಮಾಣೀಕರಿಸಿದ ದಿಃ | 19.06.2026 |
| ವೃತ್ತಿ | ಃ ನರ್ಸಿಂಗ್ ಆಫೀಸರ್ | | |
| ವಾಸ | ಃ ಮೂಡಬಿದ್ರೆ | | |

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆ:- ಮಾನ್ಯ ಎ.ಪಿ.ಪಿ.ಯವರಿಂದಃ

ಹೊಳೆನರಸೀಪುರದಲ್ಲಿ 2010 ರಿಂದ 2017 ರವರೆಗೆ ಹೊಳೆನರಸೀಪುರ ತಾಲ್ಲೂಕು ಆಸ್ಪತ್ರೆಯಲ್ಲಿ ನರ್ಸಿಂಗ್ ಆಫೀಸರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 27.01.2015 ರಂದು ರಾತ್ರಿ 10.30 ರ ಸುಮಾರಿಗೆ ನಾನು ರಾತ್ರಿ ಪಾಳೆಯದಲ್ಲಿದ್ದಾಗ ಚಾ ಸಾ 2, 3, 4, 5, 6 7, 8 , 9 ರವರು, ಕೆಲಸದಲ್ಲಿದ್ದಾಗ, ಪುಟ್ಟರಾಜು ಎನ್ನುವವರು ವಿಷ ಸೇವನೆ ಮಾಡಿ ತುರ್ತು ಚಿಕಿತ್ಸಾ ಘಟಕಕ್ಕೆ ಬಂದಾಗ ನಾವು ಅವರಿಗೆ ಚಿಕಿತ್ಸೆ ನೀಡುತ್ತಿದ್ದಾಗ ರೋಗಿ ಕಡೆಯವರು ಬಂದು ಮಧ್ಯಪಾನ ಮಾಡಿ ಬಂದು ನಮಗೆ ರಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದರು. ಚಾ ಸಾ 2 ರವರ ಈ ಕುರಿತು ಅವರನ್ನು ಪ್ರಶ್ನಿಸಿದಾಗ ರೋಗಿ ಕಡೆಯವರು ಕೆನ್ನೆಗೆ ಹೊಡೆದು ಅವರನ್ನು ನೂಕಿದರು. ನಂತರ ಚಾಸಾ 3 ರವರು ಚಾ ಸಾ 1 ರವರಿಗೆ ಈ ಬಗ್ಗೆ ತಿಳಿಸಿದಾಗ ಚಾ ಸಾ 1 ರವರು ದೂರು ನೀಡಲು ಹೇಳಿದರು. ಬೈದ ವ್ಯಕ್ತಿಯ ವಿವರವನ್ನು ವಿಚಾರಿಸಿದಾಗ ಅವರು ಮಲ್ಲಪ್ಪನಹಳ್ಳಿಯ ಮಂಜ ಆಗಿರುತ್ತಾರೆಂದು ತಿಳಿದು ಬಂದಿರುತ್ತದೆ.

2. ಈ ಬಗ್ಗೆ ದಿನಾಂಕ 28.01.2015 ರಂದು ಈ ಬಗ್ಗೆ ದೂರು ದಾಖಲಾಗಿರುತ್ತದೆ ಎಂದು ನಮಗೆ ತಿಳಿದು ಬಂದಿರುತ್ತದೆ. ಪೊಲೀಸರು ನನ್ನ ಹೇಳಿಕೆ ಪಡೆದಿರುತ್ತಾರೆ. ಸಾಕ್ಷಿ ಆರೋಪಿಯನ್ನು ಮತ್ತೇ ನೋಡಿದರೆ ಗುರುತಿಸುವುದಾಗಿ ಹೇಳಿರುತ್ತಾರೆ ಆರೋಪಿ ಪರ ವಕೀಲರು ಆರೋಪಿ ಗೈರು ಹಾಜರಾತಿ ಅರ್ಜಿ ಸಲ್ಲಿಸಿರುತ್ತಾರೆ.

(ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಭಾಗಶಃ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ. ಕಲಂ 161 ಹೇಳಿಕೆಯನ್ನು ಪರಿಶಿಲೀಸಿ ಪಾಟಿ ಸವಾಲಿಗೆ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ - ಮಾನ್ಯ ಎ.ಪಿ.ಪಿ. ರವರಿಂದಃ

ಆರೋಪಿ ಚಾ ಸಾ 2 ರವರನ್ನು ಗಲಾಟೆಯಲ್ಲಿ ದೂಕಾಡಿರುತ್ತಾರೆ ಎಂದರೆ ಸರಿ.

ಪಾಟೀ ಸವಾಲುಃ - ಆರೋಪಿ ಪರ ಶ್ರೀ ಹೆಚ್ ಟಿ ಆರ್ ವಕೀಲರಿಂದಃ

ನಾನು ಗಲಾಟೆ ದಿನಾ ರಾತ್ರಿ 8.00 ಗಂಟೆಗೆ ಕರ್ತವ್ಯಕ್ಕೆ ಹಾಜರಾಗಿರುತ್ತೇನೆ. ನಾನು ಹಾಜರಾತಿ ಪುಸ್ತಕಕ್ಕೆ ಸಹಿ ಹಾಕಿರುತ್ತೇನೆ. ಪುಸ್ತಕಕ್ಕೆ ಮೊದಲು ಯಾರು ಸಹಿ ಹಾಕಿದರು ಎಂದು ನನಗೆ ಗೊತ್ತಿಲ್ಲ. ಆ ದಿನಾ ನನ್ನೊಂದಿಗೆ 7 ಜನ ಆಸ್ಪತ್ರೆ ಸಿಬ್ಬಂದಿ ಕೆಲಸ ಮಾಡುತ್ತಿದ್ದೇವು. ಗಲಾಟೆ ಸಮಯದಲ್ಲಿ ನಾವು 7 ಜನ ಒಂದೇ ರೂಮಿನಲ್ಲಿದ್ದೇವು. ನಾವು 10.30 ಗೆ ಒಟ್ಟಿಗೆ ಸೇರಿರುತ್ತೇವೆ. ಗಲಾಟೆ ಹೊರಾಂಡದಲ್ಲಿ ನಡೆದಿರುತ್ತದೆ. ಗಲಾಟೆ ಯಲ್ಲಿ ಸುಮಾರು 10 ಜನ ಸೇರಿರಬಹುದು. ಸದರಿ 10 ಜನರು ಪುಟ್ಟರಾಜು ಕಡೆಯವರು. ಸದರಿ 10 ಜನರ ವಿಳಾಸ ಹೆಸರು ನನಗೆ ಗೊತ್ತಿಲ್ಲ. ಗಲಾಟೆ ಮಾಡಿದ ವ್ಯಕ್ತಿಯ ವಿವರವನ್ನು ಪುಟ್ಟರಾಜು ರವರ ಬಳಿಯೇ ಕೇಳಿರುತ್ತೇವೆ. ಆ ಸಮಯದಲ್ಲಿ ಪುಟ್ಟರಾಜುರವರು ಮಾನಸಿಕ ದೈಹಿಕವಾಗಿ ಚೆನ್ನಾಗಿದ್ದರು. ಪುಟ್ಟರಾಜುರವರಿಗೆ ವಾಂತಿ ಮಾಡಿಸಿ ಗ್ಲೂಕೋಸ್ ಇಂಜೆಕ್ಷನ್ ನೀಡಿರುತ್ತೇವೆ. ಅವರು 10.15 ಕ್ಕೆ ಬಂದಿರುತ್ತಾರೆ. ಅವರಿಗೆ ಚಿಕಿತ್ಸೆ ನೀಡಲು ಅರ್ಧ ಗಂಟೆ ಯಿಂದ ಮುಕ್ಕಾಲು ಗಂಟೆ ಬೇಕು ಎಂದರೆ ಸರಿ.

2. ಅವರು ವಿಷ ಸೇವನೆ ಮಾಡಿದ ಕಾರಣಕ್ಕೆ ಮಾನಸಿಕವಾಗಿ ಸ್ವಸ್ಥರಾಗಿಲಿಲ್ಲ ಎಂದರೆ ಸರಿ. ಅವರಿಗೆ ಮಾತನಾಡಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಪುಟ್ಟರಾಜು ರವರು ನನಗೆ ಯಾವುದೇ ಮಾಹಿತಿ ನೀಡಿಲ್ಲ ಎಂದರೆ ಸರಿಯಲ್ಲ. ಗಲಾಟೆ ಮಾಡಿದ ವ್ಯಕ್ತಿ ಯಾವ ಬಟ್ಟೆ ಹಾಕಿದ್ದರು ನನಗೆ ನೆನಪಿಲ್ಲ. ಅವರ ಎತ್ತರ ನನಗೆ ನೆನಪಿಲ್ಲ . ಮಲ್ಲಪ್ಪನಹಳ್ಳಿ ಮಂಜ ಎನ್ನುವವರು ಸುಮಾರು ಜನ ಇರಬಹುದು ಎಂದರೆ ಸರಿ. ಮಂಜ ರವರು ಯಾವುದೇ ಗಲಾಟೆ ಮಾಡಿಲ್ಲ, ಪುಟ್ಟರಾಜು ರವರು ವಿಷ ಕುಡಿದ ಬಗ್ಗೆ ಸರಿಯಾದ ಚಿಕಿತ್ಸೆ ನೀಡಿದ್ದನ್ನು ಪ್ರಶ್ನಿಸಿದ ಕಾರಣಕ್ಕೆ ಆರೋಪಿ ವಿರುದ್ಧ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಠಾಣೆಗೆ ಹೋಗಿಲ್ಲ. ಠಾಣೆಯಲ್ಲಿ ನನ್ನ ಹೇಳಿಕೆ ಪಡೆದ ಬಗ್ಗೆ ನನಗೆ ಈಗ ನೆನಪಿಲ್ಲ. ಯಾವ ವ್ಯಕ್ತಿ ಬೈದಿದ್ದು ಆ ವ್ಯಕ್ತಿಯ ಚಹರೇ ನನಗೆ ಗೊತ್ತಿರದ ಕಾರಣ ಆ ವ್ಯಕ್ತಿ ಗಲಾಟೆ ಮಾಡಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಠಾಣೆಗೆ ಹೋಗಿಲ್ಲ. ಠಾಣೆಯಲ್ಲಿ ನನ್ನ ಹೇಳಿಕೆ ಪಡೆದ ಬಗ್ಗೆ ನನಗೆ ಈಗ ನೆನಪಿಲ್ಲ. ಚಾ ಸಾ 3 ರವರು ಚಾ ಸಾ 1 ರವರಿಗೆ ದೂರು ನೀಡಿದ ನಿಖರವಾದ ಸಮಯ ನನಗೆ ನೆನಪಿಲ್ಲ. ದೂರಿನಲ್ಲಿ ಬರೆದಿವರು ಅಂಶಗಳು ನಿಮಗೆ ತಿಳಿದಿಲ್ಲ ಎಂದರೆ ಸಾಕ್ಷಿಯು ಹೊಡೆದಿರುವ ಬಗ್ಗೆ ನಮೂದಾಗಿರುತ್ತದೆ ಎನ್ನುತ್ತಾರೆ. ಗಲಾಟೆ ಸಮಯದಲ್ಲಿ ವಾರ್ಡ್ ನಲ್ಲಿ ಸಿ ಸಿ ಟಿವಿ ಇದ್ದ ಬಗ್ಗೆ ನನಗೆ ನೆನಪಿಲ್ಲ. ಆರೋಪಿ ಯಾವುದೇ ಗಲಾಟೆ ಮಾಡಿಲ್ಲ, ಪುಟ್ಟರಾಜು ರವರು ವಿಷ ಕುಡಿದ ಬಗ್ಗೆ ಸರಿಯಾದ ಚಿಕಿತ್ಸೆ ನೀಡಿದ್ದನ್ನು ಪ್ರಶ್ನಿಸಿದ ಕಾರಣಕ್ಕೆ ಆರೋಪಿ ವಿರುದ್ಧ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸ ರಿಯಲ್ಲ. ನಾನು ಸ್ಥಳದಲ್ಲಿ ಇರಲಿಲ್ಲ ಆಗಾಗಿ ಯಾವ ಅಂಶಗಳು ತಿಳಿದಿಲ್ಲ ಎಂದರೆ ಸರಿಯಲ್ಲ, ನನಗೆ ಯಾವುದೇ ಅಂಶ ತಿಳಿಯದಿದ್ದರೂ ನನ್ನ ಇಲಾಖಾ ಸಿಬ್ಬಂದಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸ ರಿಯಲ್ಲ.

ಪಾಟೀ ಸವಾಲು ಮುಕ್ತಾಯಃ

ಮರು ವಿಚಾರಣೆ ಇಲ್ಲಃ

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇ.**

1ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ,

ಹೊಳೆನರಸೀಪುರ